# ದಶಕದ ಸಂಭ್ರಮದಲ್ಲಿ ಬಿಗ್ ಬಾಸ್

**ಬಿಗ್ ಬಾಸ್ ಮತ್ತೆ ಶುರುವಾಗುತ್ತಿದೆ. ಮನೆಯೊಳಗಿನ ಕಣ್ಣೊಂದು ಎಲ್ಲರನ್ನೂ ನೋಡುತ್ತಿದೆ! ಆ ಕಣ್ಣಿನ ಆಟದಲ್ಲಿ ಒಂದಲ್ಲಾ ಒಂದು ಬಗೆಯಲ್ಲಿ ನಾವೆಲ್ಲರೂ ಇರುತ್ತೇವೆ...**

'ಬಿಗ್ ಬಾಸ್' ಹೊಸ ಅಧ್ಯಾಯ ಶುರುವಾಗಿದೆ. ಜೈಲಿನಂತಹ ಅದ್ದೂರಿ ಮನೆಯಲ್ಲಿ 'ಬಿಗ್ ಬಾಸ್' ಸ್ಪರ್ಧಿಗಳು ಏನು ಮಾಡುತ್ತಾರೆ ಎನ್ನುವ ಬಗ್ಗೆ ಕಿರುತೆರೆ ವೀಕ್ಷಕರ ಕುತೂಹಲದ ಕಣ್ಣು ತೆರೆದುಕೊಂಡಿವೆ. ಈ ಕುತೂಹಲ ತಣಿಸಲು ರಿಯಾಲಿಟಿ ಶೋ ಲೈವ್ ಪ್ರಸಾರ ಆಗುತ್ತಿದೆ. ದಿನದ 24 ಗಂಟೆಯೂ ಸ್ಪರ್ಧಿಗಳ ಆಟ ಮತ್ತು ಹುಡುಗಾಟವನ್ನು ನೋಡಬಹುದಾಗಿದೆ. ಈ ಬಾರಿ, 'ಜಿಯೊ ಸಿನಿಮಾ'ದಲ್ಲಿ ಉಚಿತವಾಗಿ ಲೈವ್ ನೋಡಬಹುದು. ಅವರ ಆಟ ನೋಡಿ ನಮಗೇನು ಆಗಬೇಕು ಎಂದು ಗೊಣಗುವ ಮಾತೂ ಈಗಿಲ್ಲ. ಏಕೆಂದರೆ ಆಟದಲ್ಲಿ ವೀಕ್ಷಕರೂ ಸಹಭಾಗಿಗಳಾಗಬಹುದು, ಬಹುಮಾನವನ್ನು ಗೆಲ್ಲಬಹುದು. ಇದು ದಶಮಾನೋತ್ಸವದ ಸಂಭ್ರದಲ್ಲಿರುವ 'ಬಿಗ್ ಬಾಸ್'ನ ಹೊಸ ರೂಪ.

ಹತ್ತನೇ ವರ್ಷದ ಈ ಶೋ ಅನ್ನು 12 ಸಾವಿರ ಚದರಡಿ ವಿಸ್ತೀರ್ಣದ ಹೊಸಮನೆಯಲ್ಲಿ ಆಡಿಸಲಾಗುತ್ತಿದೆ. ಆಟಗಾರರ ಬಗೆ ಬಗೆಯ ತಂತ್ರಗಳನ್ನು 'ಹಬ್ಬ' ಎಂದೇ ಕಲರ್ಸ್ ಕನ್ನಡ ವಾಹಿನಿ ಸಂಭ್ರಮಿಸುತ್ತಿದೆ. ಈ ಬಾರಿ 16 ಜನ ಆಟವನ್ನು ಆಡುತ್ತಿದ್ದಾರೆ. ಹೊಸ ಅವತರಣಿಕೆಯ ಈ ಸರಣಿಯಲ್ಲಿಯೂ ಹೊಸ ಆಟಗಳನ್ನು ಪರಿಚಯಿಸುತ್ತಿದ್ದಾರೆ. ನಿತ್ಯ ಒಂದೂವರೆ ಗಂಟೆ 'ಬಿಗ್ ಬಾಸ್' ಸೆಲೆಬ್ರಿಟಿಗಳ 24 ಗಂಟೆಯ ಕ್ರಿಯೆಯನ್ನು ಸಂಪಾದಿಸಿ ಪ್ರಸಾರ ಮಾಡುತ್ತಿದ್ದಾರೆ. ಆಗ 'ಬಿಗ್ ಬಾಸ್' ಕೇಳುವ ಪ್ರಶ್ನೆಗೆ 'ಜಿಯೊ ಸಿನಿಮಾ'ದಲ್ಲಿ ಉತ್ತರಿಸಿದರೆ ಬಹುಮಾನ ಗೆಲ್ಲಬಹುದು. ವೀಕ್ಷಕರೇ ನಿರ್ಣಾಯಕ ಸ್ಥಾನದಲ್ಲಿ ಇದ್ದು – ಯಾರು ಮನೆಯೊಳಗೆ ಇರಬೇಕು, ಯಾರು ಹೊರ ಹೋಗಬೇಕು ಎಂದು ಮೊದಲಿನಂತೆಯೇ ಈ ಬಾರಿಯೂ ನಿರ್ಧರಿಸುತ್ತಾರೆ.

'ಕೆಲವೇ ಕ್ಷೇತ್ರದವರನ್ನು ಏಕೆ ಆಯ್ಕೆ ಮಾಡುತ್ತೀರಿ' ಎಂದು ಕೇಳಿದರೆ, 'ಸ್ಪರ್ಧಿಗಳೆಲ್ಲ ಭಿನ್ನ ವ್ಯಕ್ತಿತ್ವಗಳೇ ಹೊರತು ಯಾವುದೋ ಒಂದು ಕ್ಷೇತ್ರದ ಪ್ರತಿನಿಧಿಗಳಲ್ಲ. ಇಲ್ಲಿ ಮನರಂಜನೆ ಮುಖ್ಯವಾಗುತ್ತದೆ. ಸಾಧಕರಿಗಿಂತ ಸುದ್ದಿಯಾದವರಿಗೆ ಮಾನ್ಯತೆ ಎನ್ನುವ ಆರೋಪವೂ ಸುಳ್ಳು. ಒಂದು ಕಾರ್ಯಕ್ರಮವನ್ನು ವಿನ್ಯಾಸ ಮಾಡುವಾಗ ವೀಕ್ಷಕರನ್ನು ರಂಜಿಸುವ ದೃಷ್ಟಿಯಲ್ಲಿ ಮಾತ್ರ ಯೋಚಿಸುತ್ತೇವೆ. ಬೇರೆ ಬೇರೆ ಕ್ಷೇತ್ರಗಳಿಗೆ ಪ್ರಾತಿನಿಧ್ಯ ನೀಡಬೇಕು ಎನ್ನುವ ವಿಚಾರ ಮುಖ್ಯ ಆಗುವುದಿಲ್ಲ. ವೀಕ್ಷಕನ ನಿರೀಕ್ಷೆಯೂ ಬೇರೆ ಬೇರೆ ಇರುತ್ತದೆ. ಅವನಿಗೆ ಆಟವೂ



ಇರಬೇಕು, ತುಂಟಾಟವೂ ಇರಬೇಕು. ಗ್ಲಾಮರ್ ಕೂಡ ಬೇಕಾಗುತ್ತದೆ' ಎನ್ನುವುದು ವಾಹಿನಿಯ ಸಮರ್ಥನೆ.

ಆಯ್ಕೆಯಾದ ಎಲ್ಲರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಪರೀಕ್ಷಿಸಿ ವೈದ್ಯರು ಎಲ್ಲ ರೀತಿಯಿಂದ ಸಮರ್ಥರು ಎಂದು ರುಜುವಾತು ಮಾಡಿದವರಿಗೆ ಮಾತ್ರ ಅವಕಾಶ ನೀಡಿದ್ದೇವೆ. ಏಕೆಂದರೆ ಈ ಹಿಂದಿನ ಒಂದು ಸಂಚಿಕೆಯಲ್ಲಿ ಸ್ಪರ್ಧಿಯೊಬ್ಬರ ಮೇಲೆ ಹಲ್ಲೆಯಾಗಿತ್ತು. ಅಂತಹ ಭಾವೋದ್ವೇಗದ ಘಟನೆಗಳು ಮರುಕಳಿಸಬಾರದು ಎನ್ನುವ ಕಾಳಜಿಯಿಂದ ಈ ಕ್ರಮವನ್ನು ಅನುಸರಿಸಲಾಗುತ್ತಿದೆ ಎನ್ನುತ್ತದೆ ಕಲರ್ಸ್ ವಾಹಿನಿ.

ಈ ಶೋನಲ್ಲಿ ಎಲ್ಲರೂ ನಿರ್ದೇಶಕರೆ ಎಂದು ಹೇಳುತ್ತಾರೆ 10ನೇ ಸೀಸನ್ ನಿರ್ದೇಶಕ ಪ್ರಕಾಶ್. 'ಏಕೆ ಹೀಗೆ ಹೇಳುತ್ತೀರಿ' ಎಂದರೆ, 'ಯಾವುದೋ ಕಥೆಯನ್ನು ಇಟ್ಟುಕೊಂಡು ನಿರ್ದೇಶನ ನೀಡಿದಂತೆ ರಿಯಾಲಿಟಿ ಶೋಗಳನ್ನು ರೂಪಿಸುವುದಿಲ್ಲ. ಇಲ್ಲಿ ತಂಡದ ಪ್ರತಿಯೊಬ್ಬರ ಶ್ರಮ ಮುಖ್ಯ ಆಗುತ್ತದೆ. ಎಲ್ಲರೂ ಶೋನಲ್ಲಿ ಒಳಗೊಂಡು ಹೊಸ ನೋಟವನ್ನು ಹೊರಹೊಮ್ಮಿಸುತ್ತಾರೆ. ಅದರ ಪ್ರತಿಫಲಿತವೇ ಒಂದು ಅಂದದ ಕಾರ್ಯಕ್ರಮವಾಗುತ್ತದೆ. ಇಲ್ಲಿ ಸಂಕಲನ ಮಾಡುವವರ ಪರಿಶ್ರಮ ಮತ್ತು ಕೌಶಲ್ಯ ಅತ್ಯಂತ ಮುಖ್ಯವಾಗುತ್ತದೆ. 16 ಜನರ ಆಟದ ಹಿಂದೆ ಸಾವಿರಾರು ಮಂದಿ ಕೆಲಸ ಮಾಡುತ್ತಿದ್ದಾರೆ' ಎನ್ನುತ್ತಾರೆ ಅವರು.

### ಏಕಾಂಗಿ ವೀಕ್ಷಕ ಸುದೀಪ್

'ವಾರದ ಕಥೆ ಕಿಚ್ಚನ ಜೊತೆ' ವಾರಾಂತ್ಯ ಕಾರ್ಯಕ್ರಮಕ್ಕೆ ಸಿದ್ಧಗೊಳ್ಳಲು ಸುದೀಪ್ ಏಕಾಂಗಿಯಾಗುತ್ತಾರೆ. ಪಕ್ಕದಲ್ಲಿ ತಮ್ಮ ಅಮ್ಮನೇ ಕುಳಿತು ಸಂಚಿಕೆಯನ್ನು ನೋಡಿದರೂ ಅವರಿಗೆ ಸರಿ ಆಗುವುದಿಲ್ಲ. ಏಕೆಂದರೆ, ನೋಡುತ್ತಾ ಅಮ್ಮ ಭಾವಪರವಶರಾಗಿ ಏನಾದರೂ ಪ್ರತಿಕ್ರಿಯೆ ನೀಡಬಹುದು. ಅದು ತಮ್ಮ ಮೇಲೆ ಪ್ರಭಾವ ಬೀರಿದರೆ ಕಷ್ಟ ಎನ್ನುವುದು ಅವರ ಅಳುಕು. ಈ ಎಚ್ಚರಿಕೆ ಇರುವ ಕಾರಣಕ್ಕೆ ವಾರದ ಐದು ಸಂಚಿಕೆಗಳನ್ನು ಒಬ್ಬರೇ ಕುಳಿತು ಧ್ಯಾನಸ್ಥ ಸ್ಥಿತಿಯಲ್ಲೇ ನೋಡುವುದನ್ನು ರೂಢಿಸಿಕೊಂಡಿದ್ದಾರೆ. ಬೇರೆ ಕೆಲಸಗಳ ಒತ್ತಡದಲ್ಲಿ ಒಂದೆರಡು ಶೋಗಳನ್ನು ನೋಡಲು ಆಗದಿದ್ದರೆ ಹಿಂದಿನ ಸಂಚಿಕೆಯನ್ನು ನೋಡಿಯೇ ಮುಂದಿನ ಸಂಚಿಕೆಯನ್ನು ನೋಡುತ್ತಾರಂತೆ. ಎಲ್ಲ ಸಂಚಿಕೆಯನ್ನು ನೋಡಿದ ನಂತರ ಹೋಂವರ್ಕ್ ಮಾಡಿಕೊಂಡು ವಾರಾಂತ್ಯದ ಕಾರ್ಯಕ್ರಮಕ್ಕೆ ಬರುತ್ತೇನೆ ಅನ್ನುತ್ತಾರೆ ನಟ ಸುದೀಪ್.

ತಮ್ಮ ಸಿದ್ಧತೆ ಮತ್ತು ಬದ್ಧತೆಯ ಬಗ್ಗೆ ಸ್ಪಷ್ಟತೆ ಇರುವ ಅವರು, 'ಸ್ಕ್ರಿಪ್ಟೆಡ್ ಶೋ' ಎಂದು ರಾಗ ಹಾಡುವ ಮಂದಿಗೆ ಖಡಕ್ಕಾಗಿಯೇ ಉತ್ತರಿಸುತ್ತಾರೆ. ಕಳೆದ 9 ವರ್ಷದ ಕಾರ್ಯಕ್ರಮಗಳನ್ನು ನೋಡಿದರೂ ಈ ಅನುಮಾನ ಏಕೆ? ಯಾವುದೇ ಹಂತದಲ್ಲಿ ಹಾಗೆ ಆಗಲು ಸಾಧ್ಯ ಇಲ್ಲ. ಸ್ವತಃ ನನಗೆ ವಾರದ ಕೊನೆಯಲ್ಲಿ ಯಾರು ಮನೆಯಿಂದ ಹೊರಗೆ ಹೋಗುತ್ತಾರೆ ಎಂದು ಕೊನೆ ಕ್ಷಣದವರೆಗೂ ಗೊತ್ತಿರುವುದಿಲ್ಲ ಎಂದು ಸಂದೇಹದ ದನಿಯನ್ನು ತಳ್ಳಿ ಹಾಕುತ್ತಾರೆ.

ಪ್ರತಿಯೊಬ್ಬ ಸ್ಪರ್ಧಿಯ ಮೇಲೂ 5 ಮಂದಿ ಕೆಲಸ ಮಾಡುತ್ತಿದ್ದಾರೆ. ದಿನದ ಯಾವ ಒಂದು ಕ್ಷಣವೂ ಮೈ ಮರೆಯುವಂತಿಲ್ಲ. ಮಧ್ಯರಾತ್ರಿಯಲ್ಲಿ ಯಾರೋ ಎದ್ದು ವಾಶ್ ರೂಮಿಗೆ ಹೋದರೂ 'ಬಿಗ್ ಬಾಸ್' ಕಣ್ಣು ಅವರ ಮೇಲೆ ಬೀಳುತ್ತದೆ. ರೌಂಡ್ ದ ಕ್ಲಾಕ್ ಎಲ್ಲರ ಕ್ರಿಯೆ ಮತ್ತು ಪ್ರತಿಕ್ರಿಯೆಯನ್ನು ಸೆರೆ ಹಿಡಿಯುವುದು ಮುಖ್ಯ ಆಗುತ್ತದೆ. ಮನೆಯೊಳಗೆ ಪ್ರತಿ ಕ್ಷಣವೂ ದಾಖಲೆಯಾಗಿರುತ್ತದೆ. ಅದು ಅಷ್ಟೇ ಪಾರದರ್ಶಕ ಕೂಡ. ಆ ಕಾರಣಕ್ಕೆ ಒಂಬತ್ತು ಸರಣಿಯನ್ನು ಖುಷಿಯಿಂದ ಮಾಡಿದ್ದೇನೆ. 10ನೆಯದನ್ನು ಮಾಡುತ್ತಿದ್ದೇನೆ. ಮುಂದೆ ಕೂಡ ಮಾಡಬಹುದು ಎನ್ನುವುದು ಸುದೀಪ್ ಅಭಿಮತ.